**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ಎಲ್. ಬೋಜೇಗೌಡ ಇವರು ನಿಯಮ 330 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ**

**-: ಸೂಚನೆ :-**

ರಾಜ್ಯದ ಕಂದಾಯ ಇಲಾಖೆ ಮತ್ತು ಭೂ ಮಾಪನ ಹಾಗೂ ಕಂದಾಯ ವ್ಯವಸ್ಥೆಯಲ್ಲಿ ಪ್ರಚಲಿತದಲ್ಲಿರುವ ನಮೂನೆ 1 -5 ಮತ್ತು 6-10 ಮತ್ತು ಏಕವ್ಯಕ್ತಿ ಪೋಡ್‌ಗೆ ಸಂಬಂಧಪಟ್ಟಂತೆ ರಾಜ್ಯದಲ್ಲಿ ಬಡವರಿಗೆ ಸರ್ಕಾರವು ಭೂ ಸಕ್ರಮಾತಿ ಸಮಿತಿಗಳ ಮೂಲಕ ಹಾಗೂ ಇತರೆಗಳ ಮೂಲಕ ಗೋಮಾಳ ಹಾಗೂ ಇತರೆ ಜಮೀನುಗಳನ್ನು ಇಡುವಳಿ / ವ್ಯವಸಾಯ ಮಾಡುವ ಸಲುವಾಗಿ ಮುಂಜೂರು ಮಾಡಲಾಗಿರುತ್ತದೆ. ಕ್ರಮವಾಗಿ ಸಾಗುವಳಿ ಚೀಟಿ ಪಡೆದ ರೈತರುಗಳ ಮುಂಜೂರಾದ ಜಮೀನುಗಳನ್ನು ಆರ್.ಟಿ.ಸಿ. ಯಲ್ಲಿ ಒಟ್ಟುಗೂಡಿಸಿ ಪೈಕಿಯಲ್ಲಿ ಇಡಲಾಗಿರುತ್ತದೆ. ಈ ಜಮೀನುಗಳನ್ನು ಸದರಿ ರೈತರುಗಳು ಅಡಮಾನ ಹಾಗೂ ವರ್ಗಾವಣೆ ಇತರೆ ವಗ್ಯೆರೆ ವ್ಯವಹಾರಗಳನ್ನು ಮಾಡಲು ಮೇಲ್ಕಂಡ ನಮೂನೆ 1-5 ಮತ್ತು 6-10 ಮಾಡಿಸಬೇಕೆಂದು ಹೇಳುತ್ತಾರೆ. ಇದರ ಬಗ್ಗೆ ರೈತರಿಗಾಗಲಿ ನಮಗಾಗಲೀ ಸರಿಯಾದ ಮಾಹಿತಿ ಇರುವುದಿಲ್ಲ. ಏಕ ವ್ಯಕ್ತಿ ಪೋಡಿನ ಬಗ್ಗೆಯೂ ಮಾಹಿತಿ ಇರುವುದಿಲ್ಲ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ ಈ ಪ್ರಕ್ರಿಯೆಯನ್ನು ಸರ್ಕಾರದಿಂದ ತಡೆ ನೀಡಲಾಗಿದೆ. ಉಳಿದ ಕಡೆ ಚಾಲ್ತಿಯಲ್ಲಿದೆ ಎಂದು ಹೇಳುತ್ತಾರೆ ಹೊರತು ಇದರ ಬಗ್ಗೆ ಆದೇಶ ಹಾಗೂ ಪ್ರಕ್ರಿಯೆಗಳ ವಿವರ ನಮಗೆ ಮತ್ತು ಸಾರ್ವಜನಿಕರಿಗೆ ಲಭ್ಯವಿರುವುದಿಲ್ಲ. ಇದರಿಂದ ರಾಜ್ಯದ ಲಕ್ಷಾಂತರ ಜನ ಬಡವರಿಗೆ ತೊಂದರೆಯಾಗಿರುತ್ತದೆ. ಆದ್ದರಿಂದ ಸರ್ಕಾರವು ಇದರ ಬಗ್ಗೆ ಸಂಪೂರ್ಣ ವಿವರದೊಂದಿಗೆ ಮಾಹಿತಿ ಒದಗಿಸುತ್ತಾ ರೈತರುಗಳಿಗೆ ಮುಂಜೂರು ಮಾಡಿದ ಜಮೀನುಗಳನ್ನು ಜರೂರಾಗಿ ಪೋಡಿ ಮಾಡಿಕೊಡುವಂತೆ ಆದೇಶ ಹೊರಡಿಸಿ ಅವರುಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಈ ವಿಷಯವನ್ನು ಸದನದಲ್ಲಿ ಮಂಡಿಸುತ್ತೇನೆ.

**-: ಹೇಳಿಕೆ :-**

ಭೂರಹಿತರಿಗೆ ಹಿಂದಿನಿಂದಲೂ ಸರ್ಕಾರಿ ಜಮೀನನ್ನು ರೈತರ ಹಿತದೃಷ್ಟಿಯಿಂದ ಕೃಷಿ ಉತ್ಪನ್ನವನ್ನು ಹೆಚ್ಚಿಸುವ ದೃಷ್ಟಿಯಿಂದ ರೈತರಿಗೆ ಮಂಜೂರಿ ಮಾಡಿದೆ. ಸಾಮಾನ್ಯ ಮಂಜೂರಾತಿ, ಪುನರ್ ವಸತಿ ಮಂಜೂರಾತಿ, ಅಕ್ರಮ-ಸಕ್ರಮ ಮಂಜೂರಾತಿ, ವಿಶೇಷ ಮಂಜೂರಾತಿ ಇತ್ಯಾದಿಯಾಗಿ ಭೂಮಿಯನ್ನು ವಿವಿಧ ರೂಪದಲ್ಲಿ, ಸಂದರ್ಭಗಳಲ್ಲಿ ಮಂಜೂರಿ ಮಾಡಿದೆ. ಒಟ್ಟಾರೆ ಸರ್ಕಾರಿ ಜಮೀನನ್ನು ಮಂಜೂರಿ ಮಾಡುವ ಸಂದರ್ಭದಲ್ಲಿ, ಮಂಜೂರಾತಿ ಸಮಯದಲ್ಲಿ, ನಿರ್ದಿಷ್ಟ ಕಡತವನ್ನು ನಿರ್ವಹಿಸಿ ಮತ್ತು ನಿರ್ದಿಷ್ಟವಾದ ಆದೇಶಗಳನ್ನು ಹೊರಡಿಸಿದೆ.

ಇಂತಹ ಮಂಜೂರಾತಿಗಳು 1940 ರ ದಶಕಗಳಿಂದಲೂ ನಡೆದಿರುವುದರಿಂದ ಮಂಜೂರಾತಿಗೆ ಸಂಬಂಧಿಸಿದ ದಾಖಲೆಗಳು ಕಾರಣಾಂತರಗಳಿಂದ ಅಲಭ್ಯವಾಗಿರುವ ಪ್ರಕರಣಗಳು ಹೆಚ್ಚಿಗೆ ಇವೆ. ಭೂ ಮಂಜೂರಾತಿ ಮಾಡುವ ಸಂದರ್ಭದಲ್ಲಿಯೇ ರೈತರಿಗೆ ಪೋಡಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಹೊಸ ಸರ್ವೆ ನಂಬರನ್ನು ಸೃಜಿಸಿ, ವಿತರಣೆ ಮಾಡಿದ್ದೇ ಆಗಿದ್ದಲ್ಲಿ, ಯಾವುದೇ ಸಮಸ್ಯೆಯು ಉದ್ಭವಿಸುತ್ತಿರಲಿಲ್ಲ. ಹೀಗಾಗದೇ ಕೇವಲ ಆರ್.ಟಿ.ಸಿ ಯಲ್ಲಿ ರೈತರ ಹೆಸರನ್ನು ಮಾತ್ರ ನಮೂದು ಮಾಡಿ, ಮೂಲ ಸರಕಾರಿ ಸರ್ವೆ ನಂಬರನ್ನೇ ಮುಂದುವರೆಸಿದ್ದರಿಂದ ಸಮಸ್ಯೆಯು ಉಂಟಾಗಿರುತ್ತದೆ. ಒಂದು ಸರ್ವೆ ನಂಬರಿನಲ್ಲಿ ಲಭ್ಯ ಜಮೀನನ್ನು ಒಂದೇ ಬಾರಿಗೆ ಮಂಜೂರಿಗೆ ಒಳಪಡಿಸದೇ ಹಲವಾರು ಬಾರಿ ಹಂತ ಹಂತವಾಗಿ ಮಂಜೂರಾಗಿರುತ್ತದೆ. ಅಲ್ಲದೆ ಮ್ಯುಟೇಷನ್ ಪ್ರಕ್ರಿಯೆಯಲ್ಲಿ ಆಗಿರುವ ವಿಳಂಬದಿಂದಾಗಿ ದುಬಾರಿ ಮಂಜೂರಿಗಳಾಗಿದೆ. ಇದರಿಂದಾಗಿ ವಾಸ್ತವವಾಗಿ ಲಭ್ಯ ಜಮೀನಿಗಿಂತ ಹೆಚ್ಚಿನ ವಿಸ್ತೀರ್ಣಕ್ಕೆ ಭೂಮಂಜೂರಿಯಾಗಿರುತ್ತದೆ ಮತ್ತು ಜಮೀನು ಸ್ಥಿತಿಯಂತೆ ದುರಸ್ತಿ ಪಡಿಸುವುದು ಕ್ಲಿಷ್ಟಕರ ಹಾಗೂ ದುಸ್ತರವಾಗಿರುತ್ತದೆ.

ಹಿಂದಿನಿಂದ ಸಾಕಷ್ಟು ಪ್ರಕರಣಗಳಲ್ಲಿ ಇಂತಹ ಕೆಲವು ಮಂಜೂರಾತಿ ಪ್ರಕರಣಗಳ ಬಾಬ್ತು ದರಖಾಸ್ತು ಪೋಡಿ ಪ್ರಕ್ರಿಯೆಯನ್ನು ಮಾಡಲಾಗಿದ್ದರೂ, ಪೂರ್ಣ ಪ್ರಮಾಣದಲ್ಲಿ ಈ ಪ್ರಕ್ರಿಯೆಯು ಜರುಗಿರುವುದಿಲ್ಲ. ಇದಲ್ಲದೇ, ಸರ್ಕಾರಿ ಜಮೀನಿನಲ್ಲಿ ಆದ ಅಭಿವೃದ್ಧಿ ಪರ ಬದಲಾವಣೆಗಳಾದ ರಸ್ತೆ, ಕೆರೆ, ಆಶ್ರಯ ಕಾಲೋನಿ ಇವುಗಳ ನಿರ್ಮಾಣದ ನಂತರ ದಾಖಲೆಗಳಲ್ಲಿ ಇಂಡೀಕರಿಸಲಾಗಿರುವುದಿಲ್ಲ. ಈ ಪರಿಸ್ಥಿತಿಯನ್ನು ಮನಗಂಡ ಸರ್ಕಾರವು ಒಂದು ಸರ್ವೆ ನಂಬರಿನಲ್ಲಿ ಮಂಜೂರಾಗಿರುವ ಎಲ್ಲಾ ಜಮೀನುಗಳನ್ನು ಒಂದೇ ಬಾರಿಗೆ ದುರಸ್ತಿಪಡಿಸುವ ಬಗ್ಗೆ ಸರ್ಕಾರದ ಸುತ್ತೋಲೆ ಸಂ,ತಾಂತ್ರಿಕ.ದರಖಾಸ್ತು. ಪೋಡಿ.ಆಂದೋಲನ.40/2008-09 ದಿನಾಂಕ:20-10-2008 ರನ್ವಯ ಕಡತದಲ್ಲಿ 1) ಭೂ ಮಂಜೂರಿ ಆದೇಶ 2) ಸಾಗುವಳಿ ಚೀಟಿ/ಹಕ್ಕುಪತ್ರ 3) ಅನುಮೋದಿತ ರೆವಿನ್ಯೂ ನಕ್ಷೆಗಳನ್ನು ಇತ್ಯಾದಿ ಮೂಲ

ದಾಖಲೆಗಳನ್ನು ಪರಿಶೀಲಿಸಿ, ದೃಢೀಕರಿಸಿ, ಮಂಜೂರಿಯ ನೈಜತೆ ಯನ್ನು ಖಾತರಿ ಪಡಿಸಿಕೊಂಡು ಪರಿಶಿಲಿಸಿಕೊಂಡು ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಿ ತಹಶೀಲ್ದಾರರು, ಉಪವಿಭಾಗಾಧಿಕಾರಿಗಳು ಹಾಗೂ ಭೂದಾಖಲೆಗಳ ಉಪ ನಿರ್ದೇಶಕರುಗಳು ದೃಢೀಕರಿಸಿ ಪೋಡಿ ಅಳತೆ ಕುರಿತು ಪ್ರಕರಣವನ್ನು ಭೂಮಾಪನ ಶಾಖೆಗೆ ಕಳುಹಿಸಲು ಮತ್ತು ಸರ್ಕಾರದ ಸುತ್ತೋಲೆ ಸಂ.ತಾಂತ್ರಿಕ.ಆಡಳಿತ.ಸುತ್ತೋಲೆ.29/2009-10 ದಿನಾಂಕ:25-1-2010 ರನ್ವಯ ಭೂಮಾಪನ ಶಾಖೆಯಿಂದ ಅಳತೆ ಕಾರ್ಯ ಕೈಗೊಂಡು ನಮೂನೆ 6 ರಿಂದ 10 ಅನ್ನು ಭರ್ತಿ ಮಾಡಿ ಅಳತೆಯಂತೆ ಮಂಜೂರಾತಿ ಮತ್ತು ಅನುಭವ ತಾಳೆಯಿರುವ ಎಲ್ಲಾ ಪ್ರಕರಣಗಳಿಗೆ ಮಂಜೂರಾದ ವಿಸ್ತೀರ್ಣ ಅಥವಾ ಅದಕ್ಕಿಂತ ಸ್ವಾಧೀನ/ಅನುಭವದ ವಿಸ್ತೀರ್ಣ ಕಡಿಮೆಯಿರುವ ಪ್ರಕರಣಗಳಲ್ಲಿ ಒಪ್ಪಿಗೆ ಮೇರೆಗೆ ಏಕಕಾಲದಲ್ಲಿ ದುರಸ್ತಿ ಕ್ರಮ ಕೈಗೊಂಡು, ಹೊಸ ನಂಬರು ನೀಡಿ ಪ್ರತ್ಯೇಕ ಪಹಣಿ ಸೃಜಿಸಲು ಸೂಚಿಸಿರುತ್ತದೆ.

ಕೆಲವು ತುರ್ತು ಮತ್ತು ವಿಶೇಷ ಸಂದರ್ಭಗಳಲ್ಲಿ ಜಮೀನು ಕ್ರಯ/ವಿಕ್ರಯ, ವಾರಸು ಇತ್ಯಾದಿ ಮಾಡಲೇ ಬೇಕಾದಂತಹ ಸಂಧರ್ಭಗಳಲ್ಲಿಅರ್ಜಿದಾರರಿಗೆ ಆಗಿರುವ ಭೂ ಮಂಜೂರಿಯು ನೈಜತೆಯಿಂದ ಕೂಡಿರುವ ಬಗ್ಗೆ, ಪರಿಶೀಲಿಸಿ ನಮೂನೆ 1 ರಿಂದ 5 ಭರ್ತಿ ಮಾಡಿ ಧೃಡೀಕರಿಸಿ ಏಕವ್ಯಕ್ತಿಗೆ ಪೋಡಿ ಮಾಡಲು ಆದೇಶಿಸಲು ಮತ್ತು ಮೂಲ ದಾಖಲೆಗಳು ಲಭ್ಯವಿಲ್ಲದ ಸಂದರ್ಭದಲ್ಲಿ ಅಂತಹ ಪ್ರಕರಣದಲ್ಲಿ ಗೈರು ವಿಲೇ ಕಡತ ಪುನರ್ ನಿರ್ಮಾಣಕ್ಕೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಗೆ ಸಲ್ಲಿಸಿ ಆದೇಶ ಪಡೆದ ನಂತರ ಪೋಡಿ ದುರಸ್ಥಿಗೆ ಆದೇಶ ನೀಡುವ ಬಗ್ಗೆ, ಸರ್ಕಾರದ ಸುತ್ತೋಲೆ ಸಂಖ್ಯೆ ಕಂಇ 8 ಎಲ್‌ಜಿಪಿ 2016 ದಿನಾಂಕ: 20-06-2016 ಹಾಗೂ ತಿದ್ದುಪಡಿ ಕಂಇ 8 ಎಲ್‌ಜಿಪಿ 2016(ಭಾಗ-1) ದಿನಾಂಕ:18-07-2016 ರನ್ವಯ ಅಧಿಕಾರವನ್ನು ತಹಶೀಲ್ದಾರರಿಗೆ ಪ್ರತ್ಯಾಯೋಜಿಸಿ ಆದೇಶಿಸಿದೆ. ಅದರಂತೆ, **ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳು ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲಿ ದರಖಾಸ್ತು ಪೋಡಿ ಪ್ರಕ್ರಿಯೆ ಕಾರ್ಯ ನಿರ್ವಹಿಸಲಾಗುತ್ತಿದೆ.**

**ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ಮಂಜೂರಿ ಪೋಡಿ ಪ್ರಕರಣಗಳಲ್ಲಿ ಸಾಧಿಸಿದ ಪ್ರಗತಿ ವಿವರ ಈ ಕೆಳಕಂಡಂತೆ ಇದೆ.**

| ಪ್ರಾ. ಶಿಲ್ಕು | ಸ್ವೀಕೃತಿ | ಒಟ್ಟು | ವಿಲೆ | ಬಾಕಿ |
|---|---|---|---|---|
| **5,173** | **10,187** | **15,360** | **6,852** | **8,508** |

**ಮುಂದುವರೆದು, ದರಖಾಸ್ತು ಪೋಡಿ ಮಾಡಲು ಇರುವ ತೊಂದರೆಗಳು :-**

1) ಆಕಾರಬಂದು & ಪಹಣಿ ವಿಸ್ತೀರ್ಣ & ಪಹಣಿ ಕಾಲಂ 3 & 9 ರಲ್ಲಿ ವಿಸ್ತೀರ್ಣದಲ್ಲಿ ವ್ಯತ್ಯಾಸಗಳಿರುವುದು.
2) ಪಹಣಿ ತಿದ್ದುಪಡಿ ಮಾಡಲು ಅವಶ್ಯಕವಾದ ಹಿಂದಿನ ಕಂದಾಯ ದಾಖಲೆಗಳು(ಮ್ಯುಟೇಷನ್, ಪಹಣಿ, ಮಂಜೂರಿ ಆದೇಶ-ಇತರೆ) ಲಭ್ಯವಾಗದಿರುವುದು.
3) ಭೂಮಂಜೂರಾತಿ ಪ್ರಕರಣಗಳಲ್ಲಿ ಸರ್ಕಾರದ ಸೂಚನೆಗಳನ್ವಯ ನಮೂನೆ 1 ರಿಂದ 5 ಭರ್ತಿ ಮಾಡುವಲ್ಲಿ ಮಂಜೂರಾತಿ ದಾಖಲೆ ಲಭ್ಯವಾಗದೇ ಇರುವುದರಿಂದ ಕಡತ ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಸಮಯ ತೆಗೆದುಕೊಳ್ಳುತ್ತಿರುವುದು.
4) ಭೂಮಂಜೂರಾತಿ ಪ್ರಕರಣಗಳಲ್ಲಿ ಮಂಜೂರಿ ಮತ್ತು ಅನುಭವ ವಿಸ್ತೀರ್ಣಗಳಲ್ಲಿ ವ್ಯತ್ಯಾಸ ಇರುವುದು ಮತ್ತು ಜಮೀನಿನ ಆಕಾರಬಂದಿನ ವಿಸ್ತೀರ್ಣಕ್ಕಿಂತ ಹೆಚ್ಚಿನ ಕ್ಷೇತ್ರಕ್ಕೆ ಮಂಜೂರಿ ಆದೇಶ ಮಾಡಿರುವುದರಿಂದ ಪಹಣಿ ಸರಿಪಡಿಸುವಲ್ಲಿ ತೊಂದರೆ ಇರುವುದು ಇತ್ಯಾದಿ.
5) ಜಮೀನಿನ ಮೂಲ ಭೂದಾಖಲೆಗಳು/ಕಂದಾಯ ದಾಖಲೆಗಳು ಶಿಥಿಲವಾಗಿದ್ದು,ಅವುಗಳ ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವಕಾಶ ಬೇಕಾಗುವುದು.
6) ಅಳತೆ ವೇಳೆ ಜಮೀನಿನ ಹಕ್ಕು & ಗಡಿ ವಿಚಾರದಲ್ಲಿ ತಕರಾರು ಇರುವುದರಿಂದ & ನ್ಯಾಯಾಲಯದಲ್ಲಿ ವಿವಾದಗಳಿರುವುದರಿಂದ ದುರಸ್ತಿ ಪ್ರಕ್ರಿಯೆ ಕಷ್ಟ ಸಾಧ್ಯವಾಗಿರುತ್ತದೆ. ಈ ರೀತಿ ಮುಂತಾದ ಕಾರಣಗಳಿಂದ ದರಖಾಸ್ತು ಪೋಡಿ ಮಾಡಲು ವಿಳಂಬವಾಗುತ್ತಿದೆ. ಇದರಿಂದಾಗಿ ಹಲವಾರು ವರ್ಷಗಳಿಂದ ರಾಜ್ಯದಲ್ಲಿ ದರಖಾಸ್ತು ಪ್ರಕರಣಗಳು ಪೋಡಿಯಾಗದೇ ಬಾಕಿ ಉಳಿದಿರುತ್ತವೆ. ಇದರಿಂದಾಗಿ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

**ದರಖಾಸ್ತು ಪೋಡಿ ಪ್ರಕರಣಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ:-**

1) ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್ ಲೈನ್ ನಲ್ಲಿ ಸ್ವೀಕರಿಸಲಾಗುತ್ತಿದ್ದು ತಂತ್ರಾಂಶದ ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಅಳವಡಿಸಲಾಗಿದೆ. ಸರದಿ ಸಾಲಿನಂತೆ ಅಳತೆಗಾಗಿ ಭೂಮಾಪಕರಿಗೆ ತಂತ್ರಾಂಶದ ಮೂಲಕ ಆನ್‌ಲೈನ್ ನಲ್ಲಿ ವಿತರಿಸಲಾಗುತ್ತಿದೆ. ಪ್ರಕರಣದಲ್ಲಿಅಳತೆಯಾದ ನಂತರ ಭೂಮಾಪಕರುಗಳಿಗೆ ಕಡತಗಳು ಹಂಚಿಕೆಯಾದಂತೆ ಸರದಿ ಸಾಲಿನಂತೆ ಆನ್‌ಲೈನ್ ನಲ್ಲಿ ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹಾ ತಂತ್ರಾಂಶದ ಮುಖಾಂತರ ಆನ್‌ಲೈನ್ ನಲ್ಲೇ ಸರದಿ ಸಾಲಿನಂತೆ ನಿರ್ವಹಿಸುವ ಮೂಲಕ ಪ್ರಕರಣಗಳ ವಿಲೆವಾರಿ ಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮವಹಿಸಲಾಗುತ್ತಿದೆ. ಇಂತಹ ಪ್ರಕರಣಗಳ ಪೈಕಿ ದರಖಾಸ್ತು ಪೋಡಿ ಪ್ರಕರಣಗಳನ್ನು ಪ್ರತ್ಯೇಕಿಸಿ, ಪ್ರತ್ಯೇಕವಾಗಿ ಪೋಡಿ ಪ್ರಕ್ರಿಯೆಯನ್ನು ಜರುಗಿಸಲಾಗುತ್ತಿದೆ.
2) ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಬಗ್ಗೆ ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ.
3) ಕಂದಾಯ ಇಲಾಖೆಯ ಅಭಿಲೇಖಾಲಯದ ಎಲ್ಲಾ ಮಂಜೂರಿಗೆ ಸಂಬಂಧಿಸಿದ ಕಡತಗಳನ್ನು Cataloging and Indexing ಮಾಡಲು ಸೂಚಿಸಿದ್ದು, ಅದರಂತೆ ಕ್ರಮ ವಹಿಸಲಾಗುತ್ತಿದೆ.
4) ಮಂಜೂರಿ ಜಮೀನುಗಳ ಪೋಡಿ ದುರಸ್ತಿ ಕಾರ್ಯವನ್ನು ಸಂಪೂರ್ಣವಾಗಿ ಆನ್‌ಲೈನ್ ಮುಖಾಂತರ ಪಾರದರ್ಶಕವಾಗಿ ನಿರ್ವಹಿಸುವ ಸಲುವಾಗಿ ಭೂಮಿ ಉಸ್ತುವಾರಿ ಕೋಶದ ಸಹಯೊಗದಲ್ಲಿ ತಂತ್ರಾಂಶ ಅಭಿವೃದ್ಧಿಪಡಿಸಲಾಗುತ್ತಿದೆ.
5) ಪಹಣಿಯಲ್ಲಿನ ಮಾಲೀಕರ ಹೆಸರು/ಪೌತಿ ಖಾತೆ, ಇತ್ಯಾದಿಗಳ ಕುರಿತಂತೆ ತಿದ್ದುಪಡಿ ಮಾಡುವ ಸಂಬಂಧ ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ.
6) ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಲು ಅಗತ್ಯ ಸೂಚನೆ ಮತ್ತು ಮಾರ್ಗಸೂಚಿಗಳನ್ನು ನೀಡಲಾಗಿದೆ.
7) ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.
8) ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿ ನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದರಿಂದ ಬಾಕಿ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತದೆ.

**ಸಂಖ್ಯೆ: ಕಂಇ 121 ಎಸ್‌ಎಸ್‌ಸಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು